<u>**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**</u>

<u>C.C. No.3134/2024</u>

CW-1 PW:1

ಸಾಕ್ಷಿಯ ಹೆಸರು ಃ ಅನೀಲಕುಮಾರ ಭೋವಿ
ತಂದೆ /ಗಂಡನ ಹೆಸರು ಃ ರಾಚಪ್ಪ
ವಯಸ್ಸು ಃ 41 ವರ್ಷ
ಉದ್ಯೋಗ ಃ ಗ್ರಾಮ ಲೆಕ್ಕಾಧಿಕಾರಿ
ವಾಸಸ್ಥಳ ಃ ನರಗುಂದ
ದಿಃ 16.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಎ.ಪಿ.ಪಿ. ಯವರಿಂದ ಃ**

ದಿಃ 02/03/2023 ರಂದು ನಾನು ನರಗುಂದದಿಂದ ಧಾರವಾಡದ ದಂತ ವೈದರ ಹತ್ತಿರ ಹೋಗಿದ್ದೇನು. ಅಲ್ಲಿಂದ ರಾತ್ರಿ 11.00 ಗಂಟೆಗೆ ಹುಬ್ಬಳ್ಳಿಗೆ ಬಂದು ಬಸ್ ಗಾಗಿ ಚೆನ್ನಮ್ಮ ಸರ್ಕಲ್ ಹತ್ತಿರ ಇರುವ ಬಸ್ ನಿಲ್ದಾಣದಲ್ಲಿ ನರಗುಂದಗೆ ಹೋಗುವ ಬಸ್‌ಗಾಗಿ ಕಾಯುತ್ತಿದ್ದೇನು. ಬಸ್ ಸಿಗಲಿಲ್ಲವಾದ ಕಾರಣ ನಾನು ಆಟೋ ಹತ್ತಿ ಹೊಸೂರ ಬಸ್ ನಿಲ್ದಾಣದ ಹತ್ತಿರ ಇರುವ ಪಾರಿಜಾತ ಲಾಡ್ಜನಲ್ಲಿ ರೂಂ ನೋಡಲು ಹೋದೇನು. ಸದರಿ ಆಟೋದಲ್ಲಿ ಮೂರು ಜನ ನನ್ನ ಜೊತೆಯಲ್ಲಿಯೇ ಹತ್ತಿದರು. ಆದರೆ ನನಗೆ ರೂಮ್ ಗಳು ಸಿಗಲಿಲ್ಲ. ನಂತರ ಪುನಃ ಆಟೋ ಹತ್ತಿ ಹಳೇ ಬಸ್ ಸ್ಟ್ಯಾಂಡ್ ಹತ್ತಿರ ಹೋದಾರಾಯಿತು ಎಂದು ಬಂದಾಗ ಸದರಿ ಆಟೋದವನು ರೇಲ್ವೆ ಕ್ವಾರ್ಟರ್ಸ ಹತ್ತಿರ ಇರುವ ಎಂಟಿಎಸ್ ಕ್ವಾರ್ಟರ್ಸ ಕರೆದುಕೊಂಡು ಹೋದ. ನಂತರ ಆಟೋದಲ್ಲಿದ್ದ ಸದರಿ ಮೂರು ಜನ ನನ್ನ ಹತ್ತಿರ ಮೊಬೈಲ, ಒಂದು ಬಂಗಾರದ ಉಂಗುರು, ಒಂದು ಬೆಳ್ಳಿಯ ಉಂಗುರ ಹಾಗೂ ನನ್ನ ಜೇಬಿನಲ್ಲಿರುವ 500 ರೂ. ಮುಖಬೆಲೆಯ 4-5 ಸಾವಿರ ರೂ.ಗಳನ್ನು ತೆಗೆದುಕೊಂಡು ನನ್ನನ್ನು ತಳ್ಳಿ ಅಲ್ಲಿಂದ ಹೋರಟು ಹೋದರು. ಅವರು ನನಗೆ ಹೊಡಿಬಡಿ ಮಾಡಿದ ಕಾರಣ ನನಗೆ ನೋವಾಗಿತ್ತು ಹಾಗಾಗಿ ಅರ್ಧ ಗಂಟೆಯ ಕಾಲ ಅಲ್ಲಿಯೇ ಇದ್ದೇನು. ನಂತರ ಮುಖ್ಯರಸ್ತೆಯ ಹತ್ತಿರ ಬಂದು ಆಟೋದವರನ್ನು ಕೇಳಿದಾಗ ಅದು ಎಂ ಟಿ ಎಸ್ ಕ್ವಾರ್ಟರ್ಸ ಜಾಗೆ ಎಂದು ಅವರು ನನಗೆ ಹೇಳಿದರು. ನಂತರ ನಾನು ನಡೆದುಕೊಂಡು ಬಸ್ ನಿಲ್ದಾಣಕ್ಕೆ ಬಂದೆ ಆಗ ರಾತ್ರಿ ಸುಮಾರು 1.00 ರಿಂದ 1.30 ಗಂಟೆಯಾಗಿತ್ತು. ನಂತರ ಬಸ್ ಹತ್ತಿಕೊಂಡು ನರಗುಂದಕ್ಕೆ ಹೋದೆನು.

ನಾನು ಚುನಾವಣಾ ಕರ್ತವ್ಯದಲ್ಲಿದ್ದ ಕಾರಣ ನನಗೆ ಪಿರ್ಯಾದಿ ಸಲ್ಲಿಸುವುದರಲ್ಲಿ ತಡವಾಯಿತು. ಹಾಗಾಗಿ ದಿಃ 15/03/2023 ರಂದು ನಾನು ಸಬ್ ಅರ್ಬನ್ ಪೊಲೀಸ್ ಠಾಣೆಗೆ ಹೋಗಿ ಪಿರ್ಯಾದಿ ನೀಡಿರುತ್ತೇನೆ. ಸದರಿ ಪಿರ್ಯಾದಿಯನ್ನು ನಿಪಿ.1 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು

ನಿಪಿ.1(ಎ) ಎಂದು ಗುರುತಿಸಲಾಯಿತು. ಅದೇ ದಿನ ಸಾಯಂಕಾಲ ಪೊಲೀಸರು ನನ್ನನ್ನು ಘಟನಾ ಸ್ಥಳಕ್ಕೆ ಕರೆದುಕೊಂಡು ಹೋದರು. ಅಲ್ಲಿ ಚಾಸಾ.2 ಮತ್ತು 3 ಸಹ ಇದ್ದರು. ಅವರ ಸಮಕ್ಷಮ ಪೊಲೀಸರು ಸಂಜೆ 4.00 ರಿಂದ 5.00 ಗಂಟೆಯವರೆಗೆ ಪಂಚನಾಮೆ ಜರುಗಿಸಿರುತ್ತಾರೆ. ಸದರಿ ಪಂಚನಾಮೆ ನಿಪಿ.2 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರತಿುಸಲಾಯಿತು. ಪಿರ್ಯಾದಿಯಲ್ಲಿ ನನ್ನ 12 ಗ್ರಾಂ ಬಂಗಾರ ಕಳೆದುಹೋಗಿದೆ ಎಂದು ಹೇಳಿದ್ದೇನು ಆದರೆ ನಜರಚೂಕಿನಿಂದ ಹಾಗೆ ಆಗಿರುತ್ತದೆ ಎಂದು ಪುನಃ ದಿಃ 16/03/2023 ರಂದು ನಾನು 10 ಗ್ರಾಂ ಬಂಗಾರ ಕಳುವಾಗಿರುವ ಬಗ್ಗೆ ಪೊಲೀಸರಿಗೆ ಮರು ಹೇಳಿಕೆ ನೀಡಿರುತ್ತೇನೆ. ಆ ದಿನ ನನ್ನ ಜೊತೆ ಆಟೋದಲ್ಲಿ ಹತ್ತಿದ ಮೂರು ಜನರು ನ್ಯಾಯಾಲಯದ ಮುಂದೆ ಇರುವ ಆರೋಪಿಗಳಾಗಿರುತ್ತಾರೆ. ಪಂಚನಾಮೆ ಸಮಯದಲ್ಲಿ ಪೊಲೀಸರು ಫೋಟೋ ಸಹ ತೆಗೆದಿರುತ್ತಾರೆ. ಸಾಕ್ಷಿ ಫೋಟೋ ನೋಡಿ ಗುರುತಿಸಿದ್ದು ಅದನ್ನು ನಿಪಿ.3 ಎಂದು ಗುರುತಿಸಲಾಯಿತು.

ಪೊಲೀಸರು ದಿಃ29/03/2023 ರಂದು ಪುನಃ ನನ್ನನ್ನು ಕರೆದು ಸಬ್ ಜೈಲ್‌ಗೆ ಕರೆದುಕೊಂಡು ಹೋದರು. ಸದರಿ ಸಮಯದಲ್ಲಿ ತಹಶೀಲ್ದಾರ್ ಹಾಗೂ ಪೊಲೀಸರು ಸಹ ಇದ್ದರು. ಅಲ್ಲಿ ಸುಮಾರು 10 ರಿಂದ 15 ಜನರನ್ನು ನಿಲ್ಲಿಸಿ ಅದರಲ್ಲಿ ಆರೋಪಿಗಳು ಯಾರು ಎಂದು ನನಗೆ ಗುರುತಿಸಲು ಹೇಳಿರುತ್ತಾರೆ. ಆಗ ನಾನು ನ್ಯಾಯಾಲಯದ ಮುಂದೆ ಇರುವ ಆರೋಪಿಗಳನ್ನು ಅಲ್ಲಿ ಗುರುತಿಸಿರುತ್ತೇನೆ. ಅದಾದ ಒಂದು ತಿಂಗಳ ನಂತರ ನನ್ನ ಕಳುವು ಆದ ಬಂಗಾರದ ಉಂಗುರವನ್ನು ನಾನು ನ್ಯಾಯಾಲಯದ ಆದೇಶದ ಪ್ರಕಾರ ಬಿಡುಗಡೆ ಮಾಡಿಕೊಂಡಿರುತ್ತೇನೆ. ಸದರಿ ಸಮಯದಲ್ಲಿ ನಾಲ್ಕು ಫೋಟೊಗಳನ್ನು ತೆಗೆದಿರುತ್ತಾರೆ. ಸದರಿ ಫೋಟೋಗಳನ್ನು ಕ್ರಮವಾಗಿ ನಿಪಿ.4 ರಿಂದ 7 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಆರೋಪ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೇಳಿದ್ದು ಸಮಂಜಸವಾದ ಕಾರಣ ನೀಡದೇ ಇರುವ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು)**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**(ಶ್ರೀಮತಿ ದೀಪಾ ಜಿ ಮನೇರಕರ)**

2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.